(ಅ) ಬಂದಿದ್ದರೆ, ಹಾನಿಗೊಳಗಾದ ಇವರಿಗೆ ಪರಿಹಾರಧನ ಮಂಜೂರು ಮಾಡಲಾಗಿದೆಯೇ; ಮಾಡಿದ್ದರೆ ಎಷ್ಟು ಮಂಜೂರು ಮಾಡಲಾಗಿದೆ;

(ಇ) ಮಂಜೂರು ಮಾಡದೆ ಇದ್ದರೆ ಎಷ್ಟು ದಿವಸಗಳಲ್ಲಿ ಮಂಜೂರು ಮಾಡಲಾಗುವುದು; ವಿವರ ಒದಗಿಸುವುದು?

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು)

(ಅ) ಸಿಂಧಗಿ ಮತಕ್ಷೇತ್ರದ ದೇವ ಹಿಪ್ಪರಗಿಯ ಉಸ್ತಾನ ಸಾಬ ಭಜನ್ ಸಾಭ ಒಡೊಡಗಿ ಇವರ ಬಟ್ಟೆಯ ಅಂಗಡಿಗೆ ಬೆಂಕಿ ಹತ್ತಿಕೊಂಡಿರುವುದು ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಅಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

(ಆ) ಸಿಂಧಗಿ ಮತಕ್ಷೇತ್ರದ ದೇವರ ಹಿಪ್ಪರಗಿಯ ಉಸ್ತಾನ್ ಸಾಬ್ ಭಜನ್ ಸಾಭ ಒಡೊಡಗಿ ಇವರ ಬಟ್ಟೆಯ ಅಂಗಡಿಗೆ ಬೆಂಕಿ ಹತ್ತಿಕೊಂಡಿರುವುದು ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಅಲ್ಲವಾದ್ದರಿಂದ, ಪರಿಹಾರ ಧನ ಮಂಜೂರು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

(ಇ) ಇದು ಉದ್ಭವಿಸುವುದಿಲ್ಲ.

ಶಿಷ್ಟಾಚಾರದ ಉಲ್ಲಂಘನೆ ಕುರಿತು

1877 (972) ಶ್ರೀ ಎನ್. ಹೆಚ್. ಶಿವಶಂಕರ್ ರೆಡ್ಡಿ (ಗೌರಿಬದನೂರು):

ಸನ್ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದ ಯಾವುದೇ ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರ ಸಮಾರಂಭಗಳನ್ನು ವ್ಯವಸ್ಥೆ ಮಾಡಿದಾಗ, ಆ ಕ್ಷೇತ್ರದ ಶಾಸಕರನ್ನು ಕಡ್ಡಾಯವಾಗಿ ಸಮಾರಂಭಕ್ಕೆ ಶಿಷ್ಟಾಚಾರವಾಗಿ ಆಮಂತ್ರಿಸಬೇಕೆಂಬ ನಿಯಮವಿರುವುದು ನಿಜವಲ್ಲವೆ;

(ಆ) ಈ ನಿಯಮವನ್ನು ಉಲ್ಲಂಘಿಸುವುದರ ವಿರುದ್ಧ ಯಾವ ಕ್ರಮ ಕೈಗೊಳ್ಳುತ್ತದೆ;

(ಇ) ಲೋಕಸಭಾ ಸದಸ್ಯರ ಪ್ರದೇಶಾಭಿವೃದ್ಧಿ ನಿಧಿಯಿಂದ ನಡೆಯುವ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆಗೆ ಆಯಾ ಕ್ಷೇತ್ರದ ಶಾಸಕರನ್ನು ಶಿಷ್ಟಾಚಾರವಾಗಿ ಆಮಂತ್ರಿಸುವುದು ಅಗತ್ಯವಿಲ್ಲವೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

(ಅ) ಚುನಾವಣಾ ಕ್ಷೇತ್ರವನ್ನು ಪ್ರತಿನಿಧಿಸುವ ಶಾಸಕರನ್ನು ಕಡ್ಡಾಯವಾಗಿ ಆಹ್ವಾನಿಸಲು ಸೂಚನೆಗಳನ್ನು ನೀಡಲಾಗಿದೆ.

(ಆ) ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ, ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

(ಇ) ಹೌದು.